ದಿಃ 27.03.2026

**ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.1038/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸತ್ಯನಾರಾಯಣರೆಡ್ಡಿ | ಪ್ರಾ.ಸಾ.06 |
| ತಂದೆಯ/ಗಂಡನ ಹೆಸರು | : | ವಿ.ಜಿ.ತಿಪ್ಪಾರೆಡ್ಡಿ | ಚಾ.ಸಾ.10 |
| ವಯಸ್ಸು | : | 63 ವರ್ಷ | |
| ಕೆಲಸ | : | ನಿವೃತ್ತ ಎ.ಎಸ್.ಐ | ಸಾ ಪ್ರ ಬೋ |
| ವಾಸ | : | ಹೊಳಲ್ಕೆರೆ | ದಿಃ27.03.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು 2010 ರಿಂದ 2013 ರವರೆಗೆ ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 06.08.2012 ರಂದು ರಾತ್ರಿ 02.15 ರ ಸಮಯದಲ್ಲಿ ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಸಾರ್ವಜನಿಕ ಆಸ್ಪತ್ರೆ ಹೊಳಲ್ಕೆರೆ ರವರಿಂದ ಬಂದಂತಹ ಮೇಮೋವನ್ನು ಪಡೆದುಕೊಂಡು ಆಸ್ಪತ್ರೆಗೆ ಬೇಟಿ ನೀಡಿ ಚಾಸಾ-1 ರವರ ಹೇಳಿಕೆಯನ್ನು ಪಡೆದುಕೊಂಡು ಬಂದು ಆರೋಪಿತರ ವಿರುದ್ಧ ಠಾಣಾ ಮೊಕದ್ದಮೆ ಸಂ.339/2012 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೆ ವರದಿ ಮಾಡಿರುತ್ತೇನೆ. ಸಾಕ್ಷಿ ಆಸ್ಪತ್ರೆಯಿಂದ ಬಂದಂತಹ ಮೇಮೋವನ್ನು ನೋಡಿ ಗುರುತಿಸಿದ್ದು, ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ನಿಪಿ-1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ದಿನಾಂಕ 06.08.2012 ರಂದು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಚಾಸಾ-5 ರವರು ಸ್ಥಳ ತೋರಿಸಿದ ಮೇರೆಗೆ ಚಾಸಾ-6 ಮತ್ತು 7 ರವರ ಸಮಕ್ಷಮ ಬೆಳಿಗ್ಗೆ 10.00 ರಿಂದ 10.45 ರವರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಸಮಯ ದಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಮುದ್ದೆ ಮಾಲು.1 ರ ಕುಡಗೋಲನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲನ್ನು ಮಾಲುಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿ ನಿಪಿ-2 ರಲ್ಲಿನ ತನ್ನ ಸಹಿಯನ್ನು ನೋಡಿ

ದಿಃ 27.03.2026

ಗುರುತಿಸಿದ್ದು, ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರಾದ ಚಾಸಾ-2 ರಿಂದ 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಪ್ರಕರಣದ ಕಡತವನ್ನು ಚಾಸಾ-11 ರವರಿಗೆ ವಹಿಸಿ ಕೊಟ್ಟಿರುತ್ತೇನೆ.

**<u>ಪಾಟೀ ಸವಾಲು : ಆರೋಪಿತರ ಪರ ಶ್ರೀ ಆರ್.ಎಸ್. ವಕೀಲರಿಂದ</u>**

3. ನಿಪಿ-1 ರ ದೂರನ್ನು ಚಾಸಾ-1 ರವರೇ ಬರೆದುಕೊಟ್ಟಿರುತ್ತಾರೆ. ದೂರಿನಲ್ಲಿನ ಅಂಶಗಳ ಕುರಿತಾಗಿ ಪ್ರಥಮ ವರ್ತಮಾನ ವರದಿಯಲ್ಲಿ ನಮೂದು ಮಾಡುತ್ತೇವೆ ಎಂದರೆ ಸರಿ. ನಿಪಿ-1 ರ ದೂರಿನಲ್ಲಿ ಕುಡಗೋಲು ಎಂದು ನಮೂದು ಇಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಕೊಡಯಿಂದ ಎಂದು ನಮೂದು ಇದೆ. ಪ್ರಥಮ ವರ್ತಮಾನ ವರದಿಯಲ್ಲಿ ಕೊಡ ಯಿಂದ ಹಲ್ಲೆ ಆಗಿರುವ ಕುರಿತು ನಮೂದು ಮಾಡಿಲ್ಲ. ನಿಪಿ-1 ರ ದೂರಿನಲ್ಲಿ ತಿದ್ದುಪಡಿಯಾಗಿರುವ ಬಗ್ಗೆ ಮತ್ತು ಹೆಚ್ಚುವರಿಯಾಗಿ ಉಲ್ಲೇಖ ಮಾಡಿರುವ ಬಗ್ಗೆ ಚಾಸಾ-1 ರವರ ಹಿಂಬರಹ ಸಹಿಯನ್ನು ಪಡೆದುಕೊಂಡಿಲ್ಲ. ದೂರನ್ನು ಸ್ವೀಕರಿಸಿ ಪ್ರಥಮ ವರ್ತಮಾನ ವರದಿ ದಾಖಲಿಸಿದ ನಂತರ ಮಹಜರನ್ನು ತಯಾರಿಸಿರುತ್ತೇವೆ. ನಾನು ಸ್ಥಳಕ್ಕೆ ಬೇಟಿ ನೀಡಿಲ್ಲ, ಮಹಜರನ್ನು ಜರುಗಿಸಿಲ್ಲ ಮತ್ತು ಯಾವುದೇ ಮುದ್ದೆ ಮಾಲನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿಯೇ ನಿಪಿ-1 ರ ದೂರನ್ನು ಮತ್ತು ನಿಪಿ-2 ರ ಮಹಜರನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ನೆಡಯದಿದಾಗ್ಯೂ ಆರೋಪಿತರಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದೂರಿನ ಆಧಾರದಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.